ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ರೆಸ್ಟೋರ್ ಮಾಡಬೇಕೆಂದು ರೈತರಿಂದ ಅರ್ಜಿ ಬಂದಮೇರೆ ತಾನೇ ಅಂದಾಜು ಮಾಡಿಸುವುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆದರ ಮೇರ್ಜೆಚೆನ್ಸಿನು ರೈತರ ಜವಾಬ್ದಾರಿ. ರೆಸ್ಟೋರ್ ಮಾಡಬೇಕೆಂದು ಅರ್ಜಿ ಬಂದರೆ ನಾವು ಮಾಡತ್ತೇವೆ. ಆಲ್ಲದೆ ಇಕ್ಸೆಪ್ಷರ್ಷ್ ಕಾಲದಲ್ಲಿ ಅಗತ್ಯವಿದೆ ಎಂದು ಕಂಡುಬಂದರೂ ಮಾಡಿಸುತ್ತೇವೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ರೆವಿನ್ಯೂ ಅಧಿಕಾರಿಗಳು ರೈತರುಗಳಲ್ಲಿ ತಮ್ಮ ಮಾತುಬಾರಿಯ ಪ್ರಭಾವವನ್ನು ಉಪಯೋಗಿಸಿ ಅವರು ತಮ್ಮ ಹಿತದೃಷ್ಟಿಯಿಂದಲೇ ಅವರವರ ಭಾಗದ ಕೆಲಸವನ್ನು ಮಾಡುವಂತೆ ಪ್ರೇರೇಪಿಸಬೇಕೆಂದು ಇದೆ. ಹಾಗಾದರೆ ಪಬ್ಲಿಕ್ ವರ್ಕ್ಸ್ ಇರಾಖೆಯವರು ಆ ಕೆಲಸ ಮಾಡುವುದಿಲ್ಲವೇ?

The Hon'ble Sri T. MARIAPPA.—Majority of the tanks are under the management of the Revenue Department. ಅವರಿಗೆ ರೈತರ ಜೊತೆಯಲ್ಲಿ ನಿಕಟ ಸಂಬಂಧವಿರುವುದರಿಂದ, ರೈತರನ್ನು ಪ್ರೋತ್ಸಾಹಿಸಿ ಕೆಲಸ ಮಾಡಿಸಬೇಕೆಂದು ಹೇಳಿದೆ.

Steps taken to place Sheep and Poultry Farms on a satisfactory basis.

*Q.—Sri K. PUTTASWAMY (Mandya District—General).—

Will the Government be pleased to state :—

(*a*) the number of sheep farms and poultry farms that were in existence in 1949;

(*b*) the steps taken to place them on satisfactory basis?

A.—The Hon'ble Sri T. MARIAPPA (Home Minister).—

(*a*) (i) Sheep Farms ... 6
(ii) Poultry Farms ... 5

(*b*) (i) *Sheep Farms.*—As a measure of economy all the Sheep Farms were disbanded during 1950 and the sheep and other equipments were subsequently transferred to Hessarghatta and Kunigal Farms for starting Sheep Farms on subsidiary basis during 1950. A fresh stock of 166 ewes and 4 rams of Bannur breed were also purchased for developing mutton type sheep at Hessarghatta Farm.

(ii) *Poultry Farms.*—As a measure of economy small Poultry Units scattered at Dodballapur, Ramanagar, Hunsur and Ajjampura were disbanded and in lieu of these small units one large scale 1,000 layer Poultry Farm at Hessarghatta Farm was started. The object of this Farm is to run this venture on a self-supporting basis and also to cater to the needs of the public of the State.

ಶ್ರೀ ಕೆ. ಪುಟ್ಟಸ್ವಾಮಿಯವರು.—ಈ ಕುರಿ ಫಾರಂನಾ ಕ್ಷೇತ್ರಗಳು ಎಲ್ಲೆಲ್ಲ ಇದ್ದವು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೈಸೂರು ಡಿಸ್ಟ್ರಿಕ್ಟ್ ಮಲಚಹಳ್ಳಿ, ಬೆಂಗಳೂರು ಡಿಸ್ಟ್ರಿಕ್ಟ್ ಮುಳಗಹಳ್ಳಿ, ದೊಡ್ಡಬಳ್ಳಾಪುರ, ಕುಂಭಾಪುರ, ಚಿಕ್ಕನಂದ್ಯ, ಕೊರೆಗಾವರ್.

ಶ್ರೀ ಕೆ. ಪುಟ್ಟಸ್ವಾಮಿಯವರು.—ಒಂದೊಂದು ಕ್ಷೇತ್ರದಲ್ಲಿ ಎಷ್ಟೆಷ್ಟು ಕುರಿಗಳಿದ್ದವು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

Sri K. PUTTASWAMY.—What was the progress in each of those farms?

The Hon'ble Sri T. MARIAPPA.—I do not know what the Hon'ble Member means by "progress". They were being tended and we used to watch how far they would react to the climate and whether they were woolly type of sheep or mutton type of sheep

ಶ್ರೀ ಕೆ. ಪುಟ್ಟಸ್ವಾಮಿಯವರು.—ಕುರಿಗಳು ಹೆಚ್ಚು ತ್ತಾ ಇದ್ದುದು ಯಾವ ಪರ್ಸೆಂಟೇಜ್ ಮೇರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಕೆ. ಪುಟ್ಟಸ್ವಾಮಿಯವರು.—ಈ ಆರು ಕ್ಷೇತ್ರಗಳನ್ನು ತೆಗೆದುಹಾಕುವುದಕ್ಕೆ ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—As a measure of economy ಎಂಬುದಾಗಿ ಉತ್ತರ ಕೊಟ್ಟಿದೆ.

Sri K. PUTTASWAMY.—Does it mean that these sheep farms were not self-supporting?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. Self-supporting ಆಗಿ ಇರಲಿಲ್ಲ.

Sri K. PUTTASWAMY.—What were the reasons for not being self-supporting?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Research activities ಇಟ್ಟುಕೊಂಡು self-supporting ಆಗುವುದು ಕಷ್ಟ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಒಂದೊಂದು ಪೌಲ್ಟ್ರಿ ಫಾರಂನಲ್ಲಿ ಎನು ಫಾಯ್ದೆ ಬರುತ್ತಿತ್ತು ಎಂಬುದನ್ನು ಹೇಳುವುದಕ್ಕಾಗುತ್ತದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಕೆ. ಪುಟ್ಟಸ್ವಾಮಿಯವರು.—ಇತರ ಕ್ಷೇತ್ರಗಳನ್ನೆಲ್ಲಾ ತೆಗೆದು ಹೆಸರುಘಟ್ಟದಲ್ಲಿ ಎಕಾನಮಿ ಮೆಷರ್ ಗೋಸ್ಕರ ಒಂದೇ ಕಡೆ ಕೇಂದ್ರೀಕರಿಸಲಾಯಿತೇ?

The Hon'ble Sri T. MARIAPPA.—As a matter of economy and also to obviate loss.

ಶ್ರೀ ಕೆ. ಪುಟ್ಟಸ್ವಾಮಿಯವರು.—ಹಾಗಾದರೆ ಅದರಿಂದ ನಷ್ಟವಾಗುತ್ತಾ ಇತ್ತೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ರಿನರ್ಡ್ ನಡೆಸುವ ಕಡೆ ನಷ್ಟವಾಗುತ್ತದೆ. ಅನೇಕ ಕಡೆ ಇರುವುದಕ್ಕೆ ಬದರಾಗಿ ಒಂದೇ ಕಡೆ ಇರುವುದು ಸೂಕ್ತ.

ಶ್ರೀ ಕೆ. ಪುಟ್ಟಸ್ವಾಮಿಯವರು. —ಫಾಯಿದೆ ಬರದೇ ಇರುವುದಕ್ಕೆ top-heavy supervisory staff ಇದ್ದುದು ಕಾರಣವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೂ ಒಂದು ಕಾರಣ, ಅದರೂ ಶಿಬ್ಬಂದಿ ಇದ್ದೇ ಇರಬೇಕು.

ಶ್ರೀ ಎಂ. ಎರ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಕೆಲವು ಕ್ಷೇತ್ರಗಳನ್ನು ಮುಚ್ಚುರಾಗಿದೆ ಎಂದು ಹೇಳಿದ್ದೀರಿ, ಅಲ್ಲಿ ಅವು ಮರಿಗಳನ್ನು ಹಾಕಲಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮರಿಗಳನ್ನು ಹಾಕಿದವು. ಅವುಗಳಲ್ಲಿ ಕೆಲವು ನತ್ತು, ಹೋದವು.

ಶ್ರೀ ಎಂ. ಎರ್. ನಂಜರಾಜ ಅರಸ್‌ರವರು.—ಈಗ ಕಂಬಳಿ ಧಾರಣೆ ಜಾಸ್ತಿಯಾಗಿದೆ. ಹಾಗಿದ್ದರೂ self-supporting ಆಗಿಲ್ಲವೆಂದರೆ ಆಶ್ಚರ್ಯವಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಿಂದೆ ನಷ್ಟವಾಗುತ್ತಾ, ಇತ್ತು, ಪ್ರಾಯಶಃ ಇನ್ನು ಮುಂದೆ ಒಂದೇ ಕಡೆ ಇಟ್ಟರುವುದರಿಂದ ನಷ್ಟ ಕಡಿಮೆಯಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈ ಫಾರಂಗಳಲ್ಲಿ ಎಷ್ಟು ಕುರಿಗಳಿದ್ದವು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು—ನುಮಾರು 500 ಕುರಿಗಳ ವರೆಗೂ ಇತ್ತು.

ಶ್ರೀ ಬಿ. ಹುಚ್ಚೇಗೌಡರು.—ಈಗ ಎಷ್ಟಿವೆ ?

ಮಾನ್ಯ ಶ್ರೀ ಟಿ. ಮರಿಯಿಪ್ಪನವರು.—ಈಗ 600 ಆಗಿರಬಹುದು.

ಶ್ರೀ ಬಿ. ಹುಚ್ಚೇಗೌಡರು.—ಕುಣಿಗರ್‌ಗೆ ಬಂದ ಮೇಲೆ ಅನೇಕ ಕುರಿಗಳು ನತ್ತುಹೋದವು ಎಂಬುದಾಗಿ ವರದಿ ಬಂತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವರದಿ ಏನೂ ಬಂದಿಲ್ಲ ಇನ್ನೂ ಅಭಿವೃದ್ಧಿಯಾಗಿದೆ. ತಾವು ಬೇಕಾದರೆ ಹೋಗಿ ನೋಡಿಕೊಂಡು ಬರಬಹುದು.

ಶ್ರೀ ಬಿ. ಹುಚ್ಚೇಗೌಡರು.—ಕುರಿ ಅಭಿವೃದ್ಧಿಮಾಡುವುದಕ್ಕೆ ಹೆಚ್ಚು ಮಾಹಿತಿ ಪಡೆಯಲು ಯಾರನ್ನಾದರೂ ಪರದೇಶಗಳಿಗೆ ಕಳುಹಿಸಿದ್ದೀರಾ :

Mr. SPEAKER.—That does not arise.

ಶ್ರೀ ಬಿ. ಹುಚ್ಚೇಗೌಡರು.—"The steps taken to place them on a satisfactory basis" ಏನು ಎಂಬುದನ್ನು ಹೇಳಿದ್ದಾರೆ.....

ಅಧ್ಯಕ್ಷರು.—ಫಾರಂನ್ನು ಸರಿಯಾದ ಸ್ಥಿತಿಯಲ್ಲಡುವುದಕ್ಕೆ ಏನೇನು ಮಾಡಿದ್ದಾರೆ ಎಂಬುದನ್ನು ಹೇಳಿದ್ದಾರೆ ಅಷ್ಟೆ.

ಶ್ರೀ ಬಿ. ಹುಚ್ಚೇಗೌಡರು.—ಕುರಿ ಅಭಿವೃದ್ಧಿಮಾಡುವ ವಿಷಯದಲ್ಲಿ ಹೆಚ್ಚು ಮಾಹಿತಿ ಪಡೆಯಲು ಯಾರನ್ನಾದರೂ ಪರದೇಶಗಳಿಗೆ ಕಳುಹಿಸಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಈ ಪ್ರಶ್ನೆಗೆ ಸರಿಯಾದ ಉಪಪ್ರಶ್ನೆಯಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಕುರಿಗಳ ಮೇಲ್ವಿಚಾರಣೆ ನೋಡಿಕೊಳ್ಳಲು ಒಬ್ಬ ಆಫೀಸರು ಇಲ್ಲವೇ ?

ಅಧ್ಯಕ್ಷರು.—ಆ ವಿಷಯ ಡಿಬೇರ್ಡ್ ಮಾಡುವುದಕ್ಕೆ ಅವಕಾಶವಿಲ್ಲವೆಂದ ಮೇಲೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಕುರಿಗಳು ಯಾರ ಮೇಲ್ವಿಚಾರಣೆಯಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವೆರ್ಲಾ ಹೆಸರುಘಟ್ಟದಲ್ಲವೆ.

ಶ್ರೀ ಬಿ. ಹುಚ್ಚೇಗೌಡರು.—ಅಲ್ಲಿದ್ದರೂ, ಅವುಗಳ ಮೇಲ್ವಿಚಾರಣೆಗೆ ಇರತಕ್ಕ ಅಧಿಕಾರಿಗಳು ಯಾರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Sheep Development Officer ಎಂಬುದಾಗಿ ಇದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಅವರನ್ನು ಪರದೇಶಕ್ಕೆ ಕಳುಹಿಸಿದ್ದಿರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಬಿ. ಹುಚ್ಚೇಗೌಡರು.—ಅವರು ಹಿಂತಿರುಗಿ ಬಂದು ಎಷ್ಟು ವರ್ಷ ಆಯಿತು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು.—ಅವರು ಮಾಹಿತಿ ಪಡೆದುಕೊಂಡು ಬಂದರೇ ಹಾಗೆಯೇ ಬಂದರೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೋದ ಮೇಲೆ ಪಡೆದು ಕೊಂಡೇ ಬಂದಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಅವರು ಈಗ ಯಾವ ಕೆಲಸದಲ್ಲಿದ್ದಾರೆ ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ರೀ ಆರ್ಗನೈಸೇಷನ್ ಆದ ಮೇಲೆ ಅವರು ಡೈರೆಕ್ಟರ್ ಆಫ್ ಅನಿಮರ್ ಹಸ್ಬೆಂಡರಿಗೆ ಅಫೀಸ್ ಅಸಿಸ್ಟೆಂಟ್‌ಆಗಿರುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಕುರಿ ಫಾರಂ ಮುಚ್ಚುವುದು ಅಭಿವೃದ್ಧಿಮಾಡುವುದಕ್ಕೆ ಸರಿಯಾದ ಮಾರ್ಗವಲ್ಲ ಎಂಬುದು ಗೊತ್ತೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Satisfactory basis ಮೇಲೆ ಇಡಬೇಕಂತರೇ ಹೆಸರುಘಟ್ಟದಲ್ಲಿ composite farm organise ಮಾಡಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಆ ಫಾರಂನಲ್ಲಿ ಕುರಿ ತುಪ್ಪಟ ಕತ್ತರಿಸುವುದಕ್ಕೆ ಮೆಷೀನ್ ಉಪಯೋಗಿಸುತ್ತಿದ್ದಾರೆಯೇ ಅಥವಾ ನಾಡು ಕತ್ತರಿ ಉಪಯೋಗಿಸುತ್ತಿದ್ದಾರೆಯೇ ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಎರಡೂ ಉಪಯೋಗಿಸುತ್ತಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ನಾಡು ಕತ್ತರಿ ಉಪಯೋಗಿಸುವುದರಿಂದ ತುಪಟ ತುಂಡಾಗಿ ಲುಕ್ಸಾನಾಗುತ್ತದೆ ಎಂಬುದು ಗೊತ್ತೇ ?

Mr. SPEAKER.—It does not arise.

Sri B. HUTCHE GOWDA.—I am saying that it is quite unsatisfactory. Is he satisfied that it is satisfactory?

ಅಧ್ಯಕ್ಷರು.—ನಮರ್ಪಕವಾಗಿದೆ ಎಂದು ಹೇಳುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಈಗ ಅವರುಗಳಿಗೆ ನಾಡು ಕತ್ತರಿಗಳನ್ನು ಕೊಡುತ್ತಿರುವುದರ ಬದಲು ಒಳ್ಳೆ ಕತ್ತರಿಗಳನ್ನು ಒದಗಿಸಿಕೊಡುವುದಕ್ಕೆ ಏರ್ಪಾಡುಮಾಡುತ್ತೀರಾ ?

ಅಧ್ಯಕ್ಷರು.—That question does not arise.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಕುರಿಗಳನ್ನು ಸಾಕುವುದರಲ್ಲಿ ಸಾಮಾನ್ಯವಾಗಿ ಒಂದು ಪ್ರಾಂತ್ಯದ ಕುರಿ ಬೇರೆ ಯಾವುದಾದರೂ ಪ್ರಾಂತದಲ್ಲಿ ದೊರೆಯುವುದಿಲ್ಲ, ಅಲ್ಲಿನ ವಾಯುಗುಣಕ್ಕೆ ಹೊಂದಿಕೊಂಡಿರುವುದಕ್ಕೆ ಅದಕ್ಕಾಗುವುದಿಲ್ಲ. ಉದಾಹರಣೆಗೆ ಬನ್ನೂರಿನ ಕುರಿಗಳನ್ನಾಗಲಿ ಕೋರಾರದ ಕುರಿಗಳನ್ನಾಗಲಿ ಹೆಸರುಘಟ್ಟಕ್ಕೆ ತೆಗೆದುಕೊಂಡು ಹೋದರೆ ಅವು ಅಲ್ಲಿ ಉಳಿಯುವುದಿಲ್ಲವೆಂಬುದು ತಮಗೆ ಗೊತ್ತಿದೆಯೇ ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಮೈಸೂರು ದೇಶವೇನೂ ಅಷ್ಟು ದೊಡ್ಡ ದೇಶವಲ್ಲ. ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೆಚ್ಚು ವಾಯುಗುಣದ ಭೇದ ಕಂಡುಬರುವುದಿಲ್ಲ. ಅಲ್ಲದೆ ಅನುಭವದಿಂದ ಈ ವಿಚಾರವನ್ನು ಅರಿತಿರುವ ತಜ್ಞರೇ ಹೇಳಿದ್ದಾರೆ, ಮೈಸೂರು ದೇಶದಲ್ಲಿ ಅದರಲ್ಲೂ ಹೆಸರುಘಟ್ಟದಲ್ಲಿ ಈ ಕುರಿಗಳನ್ನು ಸಾಕಬಹುದೆಂದು ಹೇಳಿದ್ದಾರೆ.

ಶ್ರೀ ಟಿ. ಮಾದಯ್ಯಗೌಡರು.—ಬನ್ನೂರು ಜಾತಿಯ ಕುರಿ ಈಗಲೂ ಅಲ್ಲಿ ಒಗ್ಗಿಕೊಂಡಿಲ್ಲವೆಂದು ದೂರುಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಬಂದಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—Woolly tvpe ಕುರಿಗಳಲ್ಲಿ ಕೋಲಾರದ ಕುರಿಗಳು ಬೇರೆ ಪ್ರಾಂತಗಳಲ್ಲಿ ನಾವು ನಿರೀಕ್ಷಿಸುವ ಗೇಣಿಗೆ ಬರುವುದಿಲ್ಲವೆಂಬುದನ್ನು ನಿಮ್ಮ ಎಕ್ಸ್‌ಪರ್ಟ್‌ಗಳು ತಿಳಿದುಕೊಂಡಿದ್ದಾರೆಯೇ ಇಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗಲ್ಲ. ನಮ್ಮ ಎಕ್ಸ್‌ಪರ್ಟ್‌ಗಳು ನಿಖರವಾಗಿ ಹೇಳಿದ್ದಾರೆ. ಈಗಲ್ಲಿ ನಾವು ಸಾಕುತ್ತಿರುವ ಕುರಿಗಳು ಸರಿಯಾಗಿ ಹೊರೆಯುತ್ತಿವೆಯೆಂದು.

ಶ್ರೀ ಟಿ. ಮಾದಯ್ಯಗೌಡರು.—ಹಾಲ ಹೆಸರಘಟ್ಟದಲ್ಲಿ ನಮ್ಮ ಪ್ರಾಂತ್ಯದಲ್ಲಿರುವ ಕುರಿಗಳಲ್ಲಿ ಯಾವ ತರಹದ್ದನ್ನು ಸಾಕುತ್ತಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ಮಟ್ಟಿಗೆ ಚೆನ್ನಿಪು ಇನ್ನೊಂದು ಉರ್ಲ ಟೈಪ್ ಇವೆರಡನ್ನು ಮಾತ್ರ ಸಾಕುತ್ತಿದ್ದೇವೆ.

ಶ್ರೀ ಟಿ. ಮಾದಯ್ಯಗೌಡರು.—ಈ woolly type ನಲ್ಲಿ ಚಿತ್ರದುರ್ಗದ ಜಾತಿಯೇ ಬೇರೆ, ಕೋಲಾರದ ಜಾತಿಯೇ ಬೇರೆ, ಕೋಲಾರದ ಜಾತಿಯನ್ನು ಚಿತ್ರದುರ್ಗದಲ್ಲಿ ಸಾಕಾವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಚಿತ್ರದುರ್ಗದ್ದು, ಕೋಲಾರದ್ದು ಎರಡೂ ಜಾತಿಗಳನ್ನೂ ತಂದು ಹೆಸರಘಟ್ಟದಲ್ಲಿ ಸಾಕಾವುದಕ್ಕಾಗುತ್ತದೆಯೇ ಇಲ್ಲವೇ ಎಂಬುದನ್ನು ಪರೀಕ್ಷೆಮಾಡಿ ನೋಡಿದ್ದೀರಾ ?

ಅಧ್ಯಕ್ಷರು —ಪರೀಕ್ಷೆ ಮಾಡಿದ್ದಾರೆಂದು ಹೇಳಿದರಲ್ಲಾ!

ಶ್ರೀ ಟಿ ಮಾದಯ್ಯಗೌಡರು.—ಈ ಕೋಳಿ ಫಾರಂಗಳನ್ನು ಹೀಗೆ ಒಂದು ಕಡೆ ಇಟ್ಟು ಅಲ್ಲಿ ಸಾಕುವ ವಿಧಾನ ಮುಂತಾದುವುಗಳನ್ನು ಜನರಿಗೆ ತಿಳಿಸುತ್ತಾ, ಹಟ್ಟಿದ ಮರಿಗಳನ್ನೂ ಮೊಟ್ಟೆಗಳನ್ನೂ ಬೇರೆ ಕಡೆಗೆ ಒದಗಿಸುತ್ತೇವೆಂದು ಹೇಳಿದ್ದೀರಿ. ಈ ರೀತಿ ಮಾಡಿ ಮೊಟ್ಟೆಗಳನ್ನು ದೂರ ತೆಗೆದುಕೊಂಡು ಹೋಗುವುದರಿಂದ ಅವು ಕೆಟ್ಟು ಹೋಗುತ್ತವೆಂಬುದು ಗೊತ್ತಿದೆಯೇ ?

The Hon'ble Sri T. MARIAPPA.—Our experience was otherwise. We ran these farms for a number of years and the result was satisfactory.

ಶ್ರೀ ಟಿ. ಮಾದಯ್ಯಗೌಡರು.—ಹಾಲ ಹೆಸರಘಟ್ಟದಲ್ಲಿರತಕ್ಕ ಫಾರಮ್ಮು ಸ್ವಾವಲಂಬಿಯಾಗಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು. —ನದ್ಯದಲ್ಲೇ self-supporting ಆಗುತ್ತದೆ. ಅಲ್ಲಿಂದ ಸಂಸ್ಥಾನದ ನಾನಾ ಕಡೆಗಳಿಗೆ ಮೊಟ್ಟೆಗಳನ್ನು ಸರಬರಾಜು ಮಾಡುತ್ತಿದ್ದೇವೆ. ಅಲ್ಲದೆ ಕೊಡಗು ಮುಂತಾದ ಕಡೆಯವರೂ ಅಲ್ಲಿಗೆ ಬಂದು ತೆಗೆದುಕೊಂಡು ಹೋಗುವವರಾಗಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಇಲ್ಲಿ ಕೆಲವು ಕುರಿ, ಕೋಳಿ ಫಾರಮ್ಮುಗಳನ್ನು ದುಬಾರಿ ಖರ್ಚಾಯಿತೆಂದು ಹೇಳಿ ವಜಾ ಮಾಡಿದ್ದೇವೆಂದು ತಿಳಿಸಿದ್ದೀರಿ. ಈ ರೀತಿ ವಜಾ ಮಾಡಿದ್ದರಿಂದ ಎಷ್ಟು ಹಣ ಉಳಿತಾಯ ಮಾಡಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.-ನಷ್ಟವಾಗುತ್ತಿದ್ದುದನ್ನು ಉಳಿಸಿದ್ದೇ ಉಳಿತಾಯ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನಾನು ಕೇಳಿದ್ದು ಅದಲ್ಲ. ಈ ಪ್ರಕಾರ ವಜಾ ಮಾಡಿದ್ದರಿಂದ ಎಷ್ಟು ಹಣ ಉಳಿತಾಯ ಮಾಡಿದಿರಿ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ನೋಟೀಸ್ ಬೇಕು. ವಾಸ್ತವವಾಗಿ ಎಷ್ಟು ನಷ್ಟವಾಗುತ್ತಿತ್ತೋ ಅದನ್ನು ಕೂಡಿದರೆ ಗೊತ್ತಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ನಿಮಗೆ ಎಷ್ಟು ನಷ್ಟವಾಗುತ್ತಿತ್ತೆಂದು ಮಾದಿ ಬಂದಿಲ್ಲವೇ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿದೆ. ಆದರೆ ನದ್ಯದಲ್ಲಿ ಅದು ನನ್ನಲ್ಲಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಈ ಕೋಳಿ ಫಾರಮ್ಮು, ಕುರಿ ಫಾರಮ್ಮುಗಳಲ್ಲಿದ್ದಂಥ ಅಧಿಕಾರಿಗಳನ್ನು ಎಲ್ಲಿಲ್ಲಿಗೆ ಕಳುಹಿಸಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವರನ್ನು ವ್ಯವಸಾಯದ ಇಲಾಖೆಯಿಂದಲೇ ತೆಗೆದುಕೊಂಡಿತ್ತು. ಇದಾದಮೇಲೆ ಅವರನ್ನು ಪುನಃ ಅವರ ಇಲಾಖೆಗೇ ವಾಪಸು ಕಳುಹಿಸಿದೆವು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅಂದಮೇಲೆ ಸರ್ಕಾರದವರು ಅವರಿಗಾಗಿ ಖರ್ಚು ಮಾಡುತ್ತಿದ್ದ ಹಣದಲ್ಲೇನೂ ಕಡಿಮೆಯಾಗಿಲ್ಲ !!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಿಲ್ಲದಿದ್ದರೂ ಬೇರೆ ಖರ್ಚುಗಳೆಲ್ಲಾ ಸೇರಿ ಸುಮಾರು 3 ಲಕ್ಷ ರೂಪಾಯಿಗಳ ಉಳಿತಾಯವಾಗಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅಲ್ಲಿದ್ದವರಲ್ಲಿ ಕೆಲವರನ್ನೇನಾದರೂ ಮನೆಗೆ ಕಳುಹಿಸಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೆಂಗಾಮಿಯಾಗಿ ಕೆಲಸದಲ್ಲಿದ್ದವರೆಲ್ಲರನ್ನೂ ರಿಟ್ರೆಂಚ್ ಮಾಡಿದ್ದೇವೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಎಷ್ಟು ಜನರನ್ನು ರಿಟ್ರೆಂಚ್ ಮಾಡಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಇಲ್ಲಿ "for starting sheep farms on subsidiary basis" ಎಂದು ಹೇಳಿದೆ. subsidiary basis ಎಂದರೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—I am sorry, Sir; it ought to be "as adjunct to the composite farm at Hessarghatta" ಎಂದು. ಕೋಳಿ ಫಾರಮ್ಮನ್ನು ಒಂದು ಮುಖ್ಯ ಕಾರ್ಯ ಭಾಗವಾಗಿಟ್ಟುಕೊಳ್ಳಕೂಡದು. It must form a part of the main activity ಎಂದು ಇಟ್ಟುಕೊಳ್ಳ ಬೇಕೆಂದು ಮಾಡಿದ್ದೇವೆ. ಈ ಪ್ರಕಾರ ಅದೊಂದು ಈ ಫಾರಮ್ಮಿನ subsidiary activity ಎಂದು ಭಾವಿಸಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಈ ರೀತಿ ಕುರಿ ಮತ್ತು ಕೋಳಿ ಫಾರಮ್ಮುಗಳನ್ನು ಇಟ್ಟುಕೊಂಡು

ಸರ್ಕಾರದವರೇ ನೇರವಾಗಿ ನಡೆಸುವುದಕ್ಕೆ ಬದಲು, ಬೇರೆ ರೀತಿಯಲ್ಲಿ ಜನರಿಗೇ ಬಿಟ್ಟು ಪ್ರೋತ್ಸಾಹ ಮಾಡುವುದು ಒಳ್ಳೆಯದೆಂಬುದನ್ನು ಯೋಚನೆ ಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಯೋಚನೆ ಮಾಡಿಯೇ, ಹೀಗೊಂದು ಕೇಂದ್ರದಲ್ಲಿ ಕಾರ್ಯ ವ್ಯವಸ್ಥೆಯಿದ್ದು, ಅಲ್ಲಿಂದ ಜನಗಳಿಗೆ ನಾನಾ ರೀತಿಯಲ್ಲಿ ಜ್ಞಾನಪ್ರಸಾರ ಮಾಡುವುದು, ಒಳ್ಳೆ ಪೊಟ್ಟೆಗಳನ್ನು ಮಾಡಿ ಹಂಚುವುದು, ಒಂದು foundation stock ಇಟ್ಟುಕೊಳ್ಳುವ ವ್ಯವಸ್ಥೆ ಮಾಡುವುದು ಏನಾ ಬಾಕಿ ಎಲ್ಲಾ ವಿಚಾರಗಳನ್ನೂ ಜನರಿಗೇ ಬಿಡಬೇಕೆಂದು ಮಾಡಿದ್ದೇವೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಕುರಿ ಸಾಕುವ Specialistರ ಸಂಬಳ ಎಷ್ಟು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರ ಸಂಬಳ ಗೊತ್ತಿಲ್ಲ; 200—10—350ರ ಗ್ರೇಡಿನಲ್ಲಿ ದ್ದಾರೆಂದು ಹೇಳಬಲ್ಲೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಕೋಳಿ Specialist ಗೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ಈ ಕುರಿ ಪಾಲನಾಕ್ಷೇತ್ರಗಳನ್ನು ಸ್ಥಾಪನೆ ಮಾಡುವ ಉದ್ದೇಶವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಳಿ ಅಭಿವೃದ್ಧಿ ಮಾಡಬೇಕು ಎಂದು.

ಶ್ರೀ ಜಿ. ನಾರಾಯಣಗೌಡರು.—ತಳಿ ಅಭಿವೃದ್ಧಿ ಮಾಡುವುದಕ್ಕೆ ಯಾವ ಯಾವ ಕಾರ್ಯಕ್ರಮ ಕೈಕೊಂಡಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೇ ಕುರಿ ಪಾಲನಾಕ್ಷೇತ್ರವನ್ನು ಏರ್ಪಡಿಸಿದೆ. ಅದರಲ್ಲಿ ಎರಡು ತೆರದ ಕುರಿಗಳನ್ನು ಸಾಕುತ್ತಿದೆ. ಒಂದು mutton type; ಇನ್ನೊಂದು woolly type. Woolly type ನ್ನು ಯಾವ ರೀತಿಯಲ್ಲಿ ಸಾಕಿದರೆ ಗುಣ್ಣ percentage ನ್ನು ಜಾಸ್ತಿ ಮಾಡಬಹುದು ಮತ್ತು ಯಾವರೀತಿ segregate ಮಾಡಬೇಕೆಂಬದನ್ನೂ ನೋಡುತ್ತಿದ್ದೇವೆ. ಹಾಗೆಯೇ mutton type ನ್ನೂ ಒಳ್ಳೆಯ ಆಹಾರ ಕೊಟ್ಟು ಹೆಚ್ಚಿಗೆ ಮಾಂಸ ಬರುವಂತೆ ಮಾಡಿ ಜನರಿಗೆ ಹಂಚಿ ಅನುಕೂಲ ಮಾಡಿಕೊಡುತ್ತೇವೆ.

ಶ್ರೀ ಜಿ. ನಾರಾಯಣಗೌಡರು.—ಈ ಟಗರುಗಳನ್ನು ಕುರಿಗಳನ್ನು ಸಾಕುವ ರೈತರಿಗೆ ಸರಬರಾಯಿ ಮಾಡುತ್ತಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲು ಮಾಡುತ್ತಿದ್ದೆವು.

ಶ್ರೀ ಜಿ. ನಾರಾಯಣಗೌಡರು.—ಈಗ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲು ಬಿಟ್ಟಿ ಕೊಡುತ್ತಿದ್ದೆವು. ಈಗ ಅದು ತಪ್ಪಿಹೋಗಿ ಅವರು ಅಸಲು ಬೆಲೆ ಕೊಟ್ಟು ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ.

ಶ್ರೀ ಜಿ. ನಾರಾಯಣಗೌಡರು.—ಯಾವ ತರಹದ್ದನ್ನು ನರಬರಾಯಿ ಮಾಡಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Woolly type ನ್ನು ಬೇಕಾದರೂ ಕೊಡುತ್ತೇವೆ; Mutton type ಬೇಕಾದರೂ ಕೊಡುತ್ತೇವೆ.

ಶ್ರೀ ಜಿ. ನಾರಾಯಣಗೌಡರು.—Australian type ನ್ನು ಕೊಡುತ್ತಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಜಿ. ನಾರಾಯಣಗೌಡರು.—ಕಾರಣ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲಿನ ವಾಯುಗುಣಕ್ಕೆ ಅವು ಸರಿಯಾಗಿ ಹೊಂದಿಕೊಳ್ಳುವಂತೆ ಕಾಣಲಿಲ್ಲ. ನೋಡಿದ್ದರಲ್ಲಿ ಫಲತಾಂಶ ಆಶಾದಾಯಕವಾಗಿ ಕಂಡುಬರದಿದ್ದುದರಿಂದ ಅದನ್ನು ಬಿಟ್ಟುಬಿಟ್ಟೆವು. ಈಗ ಬಿಕನೀರ್ ಜಾತಿಯನ್ನು ಸಾಕುವುದಕ್ಕೆ ಸಾಧ್ಯವೇ ಇಲ್ಲವೇ ಎಂದು ನೋಡುತ್ತಿದ್ದೇವೆ.

ಶ್ರೀ ಜಿ. ನಾರಾಯಣಗೌಡರು.—ನೀವು ಪರೀಕ್ಷೆ ಮಾಡಿ ನೋಡಿದ್ದರಲ್ಲಿ ಈಗ ಯಾವ ತರಹ ಟಗರು ನಮ್ಮ ದೇಶಕ್ಕೆ ಅನುಕೂಲವಾಗಿದೆಯೆಂದು ಕಂಡು ಬಂದಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮ್ಮ ನ್ಥಳದ ಜಾತಿಗಳನ್ನೇ upgrade ಮಾಡುವುದು ಸೂಕ್ತವೆಂದು ಕಂಡುಬಂದಿದೆ.

Janab SYED ABDUR RAHMAN (Chikmagalur *cum* Shimoga-Muslim).—Is it not a fact that sheep are growing thin ever since the sales tax was introduced? (Laughter)

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಈ ಕೋಳಿ ಫಾರಮ್ಮುಗಳನ್ನು ನಡೆಸುವುದಕ್ಕೇನಾದರೂ ತಾವು ಸಬ್ಸಿಡಿ ಕೊಡುತ್ತಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಚೆಗೆ ನಾವೇನೂ ಕೊಡುತ್ತಿಲ್ಲ. ಏನಾದರೂ ಇದ್ದರೆ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿಯವರು ಕೊಟ್ಟಿರಬಹುದು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಇಲ್ಲಿ 5 ಫಾರಮ್ಮುಗಳೆಂದು ಹೇಳಿದ್ದೀರಿ. ಈಗ ಅವು ಇವೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಿಂದೆ ಇದ್ದುವು ಎಂದು ಹೇಳಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ನಾಗಮಂಗಲ ತಾಲ್ಲೂಕಿನಲ್ಲಿ ಏನಾದರೂ ಹಿಂದೆ ಒಂದು ಫಾರಮ್ಮನ್ನು ಏರ್ಪಡಿಸಿದ್ದಿರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಜ್ಞಾಪಕವಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ದೇವಿ ಮಾವಿನ ಕೆರೆಯೆಂಬಲ್ಲೇನಾದರೂ ಮಾಡಿತ್ತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಅಲ್ಲಿನ ರೈತರಿಗೆ ಯಾರಿಗಾದರೂ ಸಬ್ಸಿಡಿ ಕೊಟ್ಟಿತ್ತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನನಗೆ ಜ್ಞಾಪಕವಿಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು (ಚಿತ್ರದುರ್ಗ—ಮುಸ್ಲಿಂ).—ಕೋಳಿ ಬೆಳೆಯುವುದು, ಕುರಿ ಬೆಳೆಯುವುದು ಮುಂತಾದುವು ಆಹಾರ ಹೆಚ್ಚಿಸುವ ಯೋಜನೆಯ ಒಂದು ಭಾಗವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೋಳಿ ಸಾಕುವುದು, ಕುರಿ ಸಾಕುವುದು—ಬೆಳೆಯುವುದೆಲ್ಲ—ಆಹಾರದ ಯೋಜನೆಗೆ ಸಹಕಾರಿಯಾಗಿದೆ. It is a part of the Grow More Food Plan in the sense it will meet the requirements of the non-vegetarians.

Janab J. MOHAMED IMAM.—Is mutton not food ?

The Hon'ble Sri T. MARIAPPA.—That is what I said. It is food only for non-vegetarians.

ಜನಾಬ್ ಜೆ. ಮಹಮದ್ ಇಮಾಂರವರು.—ಈಗ ಆಹಾರದ ಅಭಾವ ಇಷ್ಟು ಹೆಚ್ಚಾಗಿರುವಾಗ ಕುರಿ ಮತ್ತು ಕೋಳಿಗಳನ್ನು ಹೆಚ್ಚಿಗೆ ಬೆಳೆಸಲು ಗಮನಕೊಟ್ಟು ಅವುಗಳನ್ನು ಅಭಿವೃದ್ಧಿಗೆ ತರುವುದು ಅವಶ್ಯಕವಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಹಳ ಅವಶ್ಯಕ.

ಜನಾಬ್ ಜೆ. ಮಹಮದ್ ಇಮಾಂರವರು.—ಇದುವರೆಗೂ ತಾವು ಈ ಆಹಾರ ಹೆಚ್ಚಿಸುವ ಯೋಜನೆ ಪ್ರಾರಂಭವಾಗಿನಿಂದ ಈ ಕೋಳಿ ಮತ್ತು ಕುರಿಗಳನ್ನು ಬೆಳೆಸಲಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೆಸರಘಟ್ಟದಲ್ಲಿ ಒಂದು ಸಾವಿರ layer ಗಳನ್ನುಳ್ಳ ಒಂದು ಕೋಳಿ ಫಾರಮ್ಮನ್ನು ಏರ್ಪಡಿಸಿದ್ದೇವೆ.

ಜನಾಬ್ ಜೆ. ಮಹಮದ್ ಇಮಾಂರವರು.—ಅಲ್ಲಿ ಬೆಳೆದ ಒಳ್ಳೆಯ ತಳಿಗಳನ್ನು ಚಿತ್ರದುರ್ಗ ಮುಂತಾದ ಕಡೆಗಳಿಗೇನಾದರೂ ಸರಬರಾಯಿ ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾರು ಕೇಳಿದರೂ ಸರಬರಾಜು ಮಾಡುವುದಕ್ಕೆ ತಯಾರಾಗಿದ್ದೇವೆ.

ಜನಾಬ್ ಜೆ. ಮಹಮದ್ ಇಮಾಂರವರು.—ಈಗ ಎಷ್ಟು ಜನ ಹೋಗಿ ಬಂದು ತೆಗೆದುಕೊಂಡು ಹೋಗಿದ್ದಾರೆ?

The Hon'ble Sri H. C. DASAPPA.—10,000 hatching eggs have been distributed.

ಜನಾಬ್ ಜೆ. ಮಹಮದ್ ಇಮಾಂರವರು.—ಕೋಳಿಗಳಿಗೆ ಸಾಮಾನ್ಯವಾಗಿ ಒಂದು ತರಹ ಕಾಲರಾರೋಗ ತಗಲಿ ಹಿಂಡುಗಟ್ಟಲೆ ನಶ್ತು ಹೋಗಿ ಕೋಳಿಗಳಿಗೆ ಅಭಾವ ಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ರಾಣಿಕೆಟ್ ಎಂಬ ರೋಗ ಬಂದು ಅನೇಕ ಕೋಳಿಗಳು ಸಾಯುತ್ತಿವೆಯೆಂಬುದು ಗೊತ್ತು. ಅದಕ್ಕಾಗಿ ಕೋಳಿಗಳಿಗೆ ಇನಾಕ್ಯುಲೇಷನ್ ಮಾಡಬೇಕೆಂದು ಮಾಡಿದ್ದೇವೆ.

ಜನಾಬ್ ಜೆ. ಮಹಮದ್ ಇಮಾಂರವರು.—ನನಗೆ ತಿಳಿದಮಟ್ಟಿಗೆ ಹಳ್ಳಿಗಳಕಡೆ ಹೋಗಿ ಯಾರೂ ಇನಾಕ್ಯುಲೇಷನ್ ಮಾಡುತ್ತಿಲ್ಲ! ಈ ವಿಷಯದಲ್ಲಿ ಸಾಕಾದಷ್ಟು ನಿರೋಧಕ ಕಾರ್ಯಕ್ರಮ ನಡೆಯುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲೆಲ್ಲಿ ಜನರು ಬಂದು ವೆಟರಿನರಿ ಆಫೀಸರಿಗೆ ತಿಳಿಸುತ್ತಾರೋ ಅಲ್ಲಗೆ ಹೋಗಿ ಕಾರ್ಯಕ್ರಮ ತಗೆದುಕೊಂಡಿದ್ದಾರೆ.

ಜನಾಬ್ ಜೆ. ಮಹಮದ್ ಇಮಾಂರವರು.—ಜನರು ಬಂದು ವೆಟರಿನರಿ ಆಫೀಸರಿಗೆ ತಿಳಿಸಬೇಕೆಂದು ಮಾಡುವುದರ ಬದಲು, ಈ ಆಫೀಸರುಗಳೇ ಹೋಗಿ ಎಲ್ಲಾಕಡೆಯಲ್ಲೂ ಇನಾಕ್ಯುಲೇಷನ್ ಮಾಡುವಂತೆ ಏರ್ಪಡಿಸುವುದು ನೂಕ್ತವಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ಖರ್ಚು ಪೂರಾ ಆಗುತ್ತದೆ. ಎಲ್ಲ ಇನಾಕ್ಯುಲೇಷನ್ ಮಾಡಬೇಕೆಂದು ತಿಳಿಸಿದರೆ ಅಲ್ಲಗೆ ಬಂದು ಮಾಡುತ್ತಾರೆ.

ಜನಾಬ್ ಜೆ. ಮಹಮದ್ ಇಮಾಂರವರು.—ಕೋಳಿಗಳಿಗೆ ಈ ರೋಗ ಬಂದು ತಕ್ಷಣ ಒಂದೇ ಸಲಕ್ಕೆ 'ಚೆಟ್' ಆಗುತ್ತವೆ. ತಿಳಿಸುವುದಕ್ಕೂ ಕಾಲವಿರುವುದಿಲ್ಲ. ಆದ್ದರಿಂದ ಸರಕಾರದಲ್ಲಿ ಮೊದಲೇ ತಕ್ಕ ನಿರೋಧಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೇನಾದರೂ ಏರ್ಪಾಡು ಮಾಡುತ್ತೀರಾ?

The Hon'ble Sri T. MARIAPPA.—The matter will be considered.

Activities at Hessarghatta Grass Farm.

*Q.—95. Sri K. PUTTASWAMY (Mandya District—General).—

Will the Government be pleased to state :—

(*a*) the activities at Hessarghatta Farm ;

(*b*) whether it has been re-organised recently by converting the same into composite farm and centralising all activities ?

A.—The Hon'ble Sri T. MARIAPPA (Home Minister).—

(*a*) The following schemes are under operation at the Hessarghatta Grass Farm:—

(1) Large Scale Poultry Farming.
(2) Remount Breeding.
(3) Pony Breeding.
(4) Sheep Breeding.
(5) Boarding of Dry Cattle.
(6) Dairying.
(7) Bee-keeping.
(8) Fisheries.
(9) Calf Nursery.

(*b*) Yes.

Sri K. PUTTASWAMY.—What were the activities at the Hessarghatta Farm before it was converted into a composite farm ?

The Hon'ble Sri T. MARIAPPA.—It was mainly a grass farm and there were also remount breeding and pony breeding.

Sri K. PUTTASWAMY.—Is the grass farm being continued in the same scale?

The Hon'ble Sri T. MARIAPPA.—Yes, it has to be continued.

Sri K. PUTTASWAMY.—What was the expenditure on the establishment when it was only a grass farm ?

The Hon'ble Sri T. MARIAPPA.—I want notice.

Sri K. PUTTASWAMY.—Were there any cows when it was purely a grass farm ?